ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ. ಎಲ್. ಎಮ್. ಎಸ್ ವಕೀಲರಿಂದಃ**

ನಿಡಿ2 ರಲ್ಲಿ ತೋರಿಸಿದ ವಂಶಾವಳಿ ಸರಿ ಇರುತ್ತದೆ. ಅಣ್ಣಾಸಾಹೇಬನ ಮೊದಲ ಹೆಂಡತಿ ತಂಗೆವ್ವಳ ಮಗನ ಹೆಸರು ಶಿವನಾಯಕ ಎಂದರೆ ನಿಜ. ನಾನು ಅಣ್ಣಾಸಾಹೇಬನ 2ನೇ ಹೆಂಡತಿ ನೀಲಾಬಾಯಿಯ ಮಗ ಇರುತ್ತೇನೆ. ಸದರಿ ಮೇಲೆ ಹೇಳಿದ ಅಣ್ಣಾಸಾಹೇಬನ ಮೊದಲ ಹೆಂಡತಿಯ ಮಗ ಶಿವನಾಯಕ ಸನ್ 1946 ರಲ್ಲಿ ಬಾಳಾಸಾಹೇಬನ ಕುಟುಂಬಕ್ಕೆ ದತ್ತಕಕ್ಕೆ ಹೋಗಿರುತ್ತಾನೆಂದರೆ ನಿಜ. ಆತ ಸದರೀಯವರ ಕುಟುಂಬಕ್ಕೆ ದತ್ತಕ ಹೋದ ನಂತರ ಆತನ ಹೆಸರು ಶಿವನಾಯಕ ದತ್ತಕ ತಂದೆ ಬಾಳಾಸಾಹೇಬ ನಾಯಕ ಎಂದು ಬದಲಾವಣೆಯಾಗಿರುತ್ತದೆಂದರೆ ನಿಜ. ವಾದಿಯ ತಂದೆಯೇ ಸದರಿ ಶಿವನಾಯಕ ಇರುತ್ತಾನೆಂದರೆ ನಿಜ.

ಭೀಮರಾವ ತೀರಿಕೊಂಡ ನಂತರ ಆತನ 04 ಜನ ಮಕ್ಕಳು ಅಂದರೆ 1. ಲಕ್ಷ್ಮಣರಾವ, 2. ವೆಂಕಟರಾವ, 3. ಕೃಷ್ಣರಾವ ಹಾಗೂ 4. ಅಣ್ಣಾಸಾಹೇಬ ಎಲ್ಲರೂ ಸನ್ 1949 ರಲ್ಲಿ ಡೈರಿ ನಂಬರ 4339 ರಂತೆ ಆಸ್ತಿಗಳನ್ನು ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆಂದರೆ ನಿಜ. ಸದರಿ ಡೈರಿಯನ್ನು ನೋಡುತ್ತಿದ್ದು, ಅದನ್ನು ಮುಖಾಭಿಲೇಯಾಗಿ ನಿಪಿ.14 ಎಂದು ಗುರುತಿಸಲಾಯಿತು. ನಿಪಿ.14 ರಂತೆ ಡೈರಿಯಾಗುವ ಕಾಲಕ್ಕೆ ಶಿವನಾಯಕನ ದತ್ತಕ ತಂದೆ ಅಂದರೆ ಬಾಳಾಸಾಹೇಬ ಮತ್ತು ಅಜ್ಜ ಲಕ್ಷ್ಮಣರಾವ ತೀರಿಕೊಂಡಿದ್ದರಿಂದ ಅವರ ಪಾಲಿನ ಆಸ್ತಿಯು ಶಿವನಾಯಕನಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಬಾಳಾಸಾಹೇಬ ತೀರಿಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಡೈರಿ ನಂಬರ 4339 ರಂತೆ ಲಕ್ಷ್ಮಣರಾವರ ಪಾಲಿಗೆ ಬರಬೇಕಾದ ಆಸ್ತಿಗಳು ಶಿವನಾಯಕನ ಪಾಲಿಗೆ ಬಂದಿರುತ್ತವೆ ಎಂದರೆ ನಿಜ.

ದಾವಾ ಆಸ್ತಿಗಳು ವಾದಿಯ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ಶಿವನಾಯಕನ ಆಸ್ತಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಎರಡು ಆಸ್ತಿಗಳು ಶಿವನಾಯಕನು ಸ್ವಂತ ಖರೀದಿ ಹಿಡಿದ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ದತ್ತಕ ಆಸ್ತಿಗಳು ಇರುತ್ತವೆ ಎಂದು ನುಡಿಯುತ್ತಾರೆ.

ಶಿವನಾಯಕನಿಗೆ ಆತನ ಜನಕ ತಂದೆಯ ಕಡೆಯಿಂದ ಯಾವುದೇ ಆಸ್ತಿಗಳು ಬಂದಿರುವುದಿಲ್ಲ ಎಂದರೆ ನಿಜ. ಸದರಿ ಶಿವನಾಯಕ ದಿ.02.08.2017 ರಂದು ಖನಗಾಂವ ಗ್ರಾಮದಲ್ಲಿ ತೀರಿಕೊಂಡಿರುತ್ತಾನೆಂದರೆ ನಿಜ. ಸನ್ 1949 ರಲ್ಲಿ ಆದ ಪಾಲು ವಾಟ್ನಿಯಂತೆ ಅವರವರ ಪಾಲಿಗೆ ಬಂದ ಆಸ್ತಿಗಳನ್ನು ಅವರವರು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆಂದರೆ ನಿಜ.

ಅಣ್ಣಾಸಾಹೇಬನು ಸನ್ 1964 ರಲ್ಲಿ ತೀರಿಕೊಂಡಿರುತ್ತಾನೆ. ಸನ್ 2008 ರಲ್ಲಿ ದಾವಾ ಆಸ್ತಿಗಳನ್ನು ಶಿವನಾಯಕನೇ ಸಾಗುವಳಿ ಮಾಡುತ್ತಿದ್ದ ಎಂದರೆ ನಿಜ. ಶಿವನಾಯಕ ಬಾಳಾಸಾಹೇಬನ ಕುಟುಂಬಕ್ಕೆ ದತ್ತಕ ಹೋದ ನಂತರ ತನ್ನ ಜನಕ ತಂದೆ ಅಣ್ಣಾಸಾಹೇಬನ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಇಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಿಡಿ.2 ರಂತೆ ಯಾವ ಕಾರಣಕ್ಕಾಗಿ ಹಕ್ಕುಬಿಟ್ಟ ಪತ್ರ ಮಾಡಿಕೊಂಡಿರುತ್ತೀರಿ? ಎಂದರೆ ಸಾಕ್ಷಿಯು ಶಿವನಾಯಕನ ಎಲ್ಲಾ ಖರ್ಚು ವೆಚ್ಚಗಳನ್ನು ನಾನೇ ನೋಡಿಕೊಳ್ಳುತ್ತಿದ್ದು, ಅಲ್ಲದೇ ಆತನಿಗೆ ಹಣವನ್ನು ಕೊಟ್ಟಿದ್ದರಿಂದ ನಿಡಿ.2 ರಂತೆ ಹಕ್ಕುಬಿಟ್ಟ ಪತ್ರವನ್ನು ಬರೆದುಕೊಟ್ಟಿರುತ್ತಾನೆಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸಂಗತಿಯನ್ನು ನಿಡಿ.2 ರಲ್ಲಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ಆತನ ದೇಕರಕಿಯನ್ನು ನಾನೇ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಿಡಿ.2 ರಂತೆ ನನ್ನ ಪಾಲಿಗೆ ಬಿಟ್ಟುಕೊಟ್ಟಿರುತ್ತಾನೆಂದು ಹೇಳಲಾದ ಖನಗಾಂವ ಗ್ರಾಮದ ಸರ್ವೆ ನಂಬರ

81 ಕ್ಕೆ ಸಂಬಂಧಿಸಿದಂತೆ ಶಿವನಾಯಕನು ಒಬ್ಬನೇ ಸಂಪೂರ್ಣ ಮಾಲೀಕನು ಆಗಿರಲಿಲ್ಲ, ಸದರೀ ಆಸ್ತಿಯಲ್ಲಿ ವಾದಿಯು ಸಹ ಹಕ್ಕನ್ನು ಹೊಂದಿದ್ದಳು ಎಂದರೆ ಸರಿಯಲ್ಲ. ನಿಡಿ2 ರ ಆಧಾರದ ಮೇಲೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ನನಗೆ ಹಕ್ಕು ಬಂದಿರುತ್ತದೆ.

ನಿಡಿ.2ನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿರುತ್ತದೆಂದರೆ ಸರಿಯಲ್ಲ. ನಿಡಿ.2 ರಲ್ಲಿ ಸದರ ಜಮಿನಿನಲ್ಲಿ ನನ್ನ ಹಾಗೂ ನಿಮ್ಮ ಹಿಸ್ಸೆ ಇದ್ದು ಎಂಬ ಒಕ್ಕಣಿ ಇದ್ದು, ಆ ರೀತಿ ಏಕೆ ಬರೆಸಿರುತ್ತೀರಿ? ಎಂದರೆ ಸಾಕ್ಷಿಯು ಯಾವುದೇ ಸಮರ್ಪಕವಾದ ಉತ್ತರ ನೀಡದೇ ಸುಮ್ಮನೆ ನಿಂತುಕೊಂಡಿರುತ್ತಾರೆ. ನಿಮ್ಮ ಪ್ರಕಾರ ಸದರಿ ಸರ್ವೆ ನಂಬರ 81 ಕ್ಕೆ ಸಂಬಂಧಿಸಿದಂತೆ ನಿಡಿ2 ರಂತೆ ಹಕ್ಕು ಬಿಟ್ಟ ಪತ್ರ ಆದ ನಂತರ ಕಬ್ಜೆಗೆ ಬಂದಿರುತ್ತೀರಿ ಎಂದರೆ ಸಾಕ್ಷಿಯು ಸನ್ 2002 ರಿಂದ ನಾನೇ ಸಾಗುವಳಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಿಡಿ2 ರಲ್ಲಿ ''ಈ ದಿವಸ ನಿಮಗೆ ಬಿಟ್ಟುಕೊಟ್ಟು ಜಮೀನನ್ನು ಈ ದಿನ ನಿಮ್ಮ ಪ್ರತ್ತೆಕ್ಷ ಕಬ್ಜಾಕ್ಕೆ ಕೊಟ್ಟಿರುತ್ತೇನೆ ಎಂದು ಒಕ್ಕಣಿ'' ಇರುತ್ತದೆ ಎಂದರೆ ಸಾಕ್ಷಿಯು ಆ ದಿನ ಸದರಿ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ಬಿಟ್ಟು ಕೊಟ್ಟಿದ್ದರಿಂದ ಆ ರೀತಿ ಬರೆಸಲಾಗಿರುತ್ತದೆಂದು ಎಂದು ನುಡಿಯುತ್ತಾರೆ. ನಿಡಿ.2 ಬರೆದುಕೊಡುವ ಕಾಲಕ್ಕೆ 5 ಲಕ್ಷ ರೂ.ಹಣವನ್ನು ಶಿವನಾಯಕನಿಗೆ ಕೊಟ್ಟಿದ್ದು, ಅದಕ್ಕಿಂತ ಮುಂಚೆ ಅಂದಾಜು 3 ಲಕ್ಷ ಗಿಂತ ಹೆಚ್ಚು ಹಣ ಕೊಡುತ್ತಾ ಬಂದಿದ್ದೆ. ಸದರಿ ಹಣವನ್ನು ಶಿವನಾಯಕನಿಗೆ ಕೊಟ್ಟ ಬಗ್ಗೆ ನಿಡಿ2 ರಲ್ಲಿ ಯಾವ ಕಾರಣಕ್ಕಾಗಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಆ ಸಮಯದಲ್ಲಿ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಶಿವನಾಯಕನಿಗೆ 5 ಲಕ್ಷ ರೂ. ಅಥವಾ 3 ಲಕ್ಷ ರೂ. ಹಣವನ್ನು ಯಾವ ಕಾಲಕ್ಕೂ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು ನನ್ನ ಸ್ವಂತ ಜಮೀನಿನ ಆದಾಯದಿಂದ ಹಾಗೂ ಸ್ವಂತ ಉಳಿತಾಯದ ಹಣದಿಂದ

ಶಿವನಾಯಕನಿಗೆ ಕೊಟ್ಟಿರುತ್ತೇನೆ. ನನ್ನ ಸ್ವಂತ ಜಮೀನು ಅಂದರೆ ಅಣ್ಣಾಸಾಹೇಬನ ಪಾಲಿಗೆ ಸನ್ 1949 ರಲ್ಲಿ ಬಂದ ಜಮೀನು ಇರುತ್ತದೆಯಾ? ಅಥವಾ ಬೇರೆ ಜಮೀನುಗಳು ಇರುತ್ತವೆಯಾ? ಎಂದರೆ ಸಾಕ್ಷಿಯು ನನ್ನ ತಂದೆಯಿಂದ ಬಂದ ಜಮೀನುಗಳು ಎಂದು ನುಡಿಯುತ್ತಾರೆ.

ನಿಡಿ.2 ರಲ್ಲಿ ''ಕಾಮನ ಫಂಡಿನಲ್ಲಿರುವ 5 ಲಕ್ಷ ರೂ'' ಎಂದು ಒಕ್ಕಣಿ ಇದ್ದು, ಅದರ ಅರ್ಥ ಏನು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಹಣ ಎಂದು ನುಡಿದು , ನಂತರ ನಾನು ನನ್ನ ಸ್ವಂತ ಸಂಪಾದಿಸಿದ ಹಣವನ್ನು ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾನು ಶಿವನಾಯಕನಿಗೆ ಯಾವುದೇ ಹಣ ಕೊಡದೇ ಮೋಸದಿಂದ ನಿಡಿ.2 ನ್ನು ಬರೆಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಡಿ.2 ಕ್ಕೆ ವಾದಿ ಸಹಿ ಹಾಕಿರುವುದಿಲ್ಲ ಎಂದರೆ ನಿಜ. ಶಿವನಾಯಕ ಬಾಳಾಸಾಹೇಬನ ಕುಟುಂಬಕ್ಕೆ ದತ್ತಕ ಹೋಗಿದ್ದರಿಂದ ನನ್ನ ಹಾಗೂ ಆತನ ಮದ್ಯೆ ಅಣ್ಣತಮ್ಮಂದಿರರ ಸಂಬಂಧ ಉಳಿದಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವಿಬ್ಬರೂ ಕೂಡಿಯೇ ಇದ್ದೆವು ಎಂದು ನುಡಿಯುತ್ತಾರೆ.

ಸನ್ 2008 ರಲ್ಲಿ ಶಿವನಾಯಕನ ಆರ್ಥಿಕ ಪರಿಸ್ಥಿತಿ ಹೇಗೆ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಆತನು ಸರಿಯಾಗಿ ದುಡಿಯುತ್ತಿರಲಿಲ್ಲ ಮತ್ತು ಆತನ ಆರೋಗ್ಯ ಸ್ಥಿತಿ ಚೆನ್ನಾಗಿ ಇರಲಿಲ್ಲ ಎಂದು ನುಡಿಯುತ್ತಾರೆ. ಸನ್ 2008 ರಲ್ಲಿ ನಿಡಿ.2 ರಂತೆ ನನಗೆ ಸರ್ವೆ ನಂಬರ 81 ನೇದ್ದನ್ನು ಶಿವನಾಯಕ ಬರೆದುಕೊಡುವ ಸಂದರ್ಭ ಆತನಿಗೆ ಇರಲಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-
(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ